**<u>ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದಃ</u>**

1) ನನಗೆ ಸೇರಿದಂತೆ ಹೊನ್ನಿಗಾನ ಹಳ್ಳಿ ಸರ್ವೆ ನಂ. 124/2ಬಿ ನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ಸದರಿ ಜಾಗದಲ್ಲಿ ಒಂದು ಚರ್ಚ್ ಇದೆ ಎಂದರೆ ಸರಿ. ಚರ್ಚೆಗೆ ಸಂಬಂಧಿಸಿದ ಸ್ವತ್ತನ್ನು ಯಾರು ಯಾರಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 124/2ಎ, ಸರ್ವೆ ನಂ. 124/2ಬಿ, ಸರ್ವೆ ನಂ. 124/2ಸಿ ಮತ್ತು ಸರ್ವೆ ನಂ. 124/2ಡಿ ಗಳಲ್ಲಿ ಈ ಹಿಂದೆ ಶ್ರೀನಿವಾಸ ರವರು ನಿವೇಶನಗಳನ್ನು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ**.** ಸರ್ವೆ ನಂ. 124/2ಎ ಮತ್ತು ಸರ್ವೆ ನಂ. 124/2ಬಿ ನ ಸ್ವತ್ತುಗಳು ವಕ್ಫ ಬೋರ್ಡ ಗೆ ಸಂಬಂಧಿಸಿದ ಆಸ್ತಿಗಳು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ದರ್ಗಾ ಸರ್ವೆ ನಂ. 124/4 ರಲ್ಲಿ ಇರುತ್ತದೆ. ಸರ್ವೆ ನಂಬರ್ 124 ರಲ್ಲಿ ದರ್ಗಾ ಇರುತ್ತದೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಪ್ರತಿವಾದಿಗಳ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**